# ‘ರೋಸ್‌ಗೆ ನನ್ನ ಪ್ರೀತಿಯ ತಿಳಿಸು’

“ಇಂದು ಮುಂಜಾವಿನಲಿ ರೈಲ್ವೇ ಹಳಿಗಳ ಬಳಿ ಅವನನ್ನು ಕಂಡೆ,
ಅವನ ಸಾವು ದೂರವಿರಲಿಲ್ಲ, ಕೊನೆಯುಸಿರು ಸಿಕ್ಕಿಕೊಂಡಿತ್ತು.
ಅವನ ಬಳಿ ಕುಳಿತುಕೊಂಡೆ, ಅವನ ಮಾತುಗಳ ಕೇಳಲು,
ಕುಳಿತು, ಸಾಯುತ್ತಿದ್ದವನ ಮಾತುಗಳ ಕೇಳಿಸಿಕೊಂಡೆ.

ಅವನು ನುಡಿದ - ನಾನು ಫ್ರಿಸ್ಕೋ ಜೈಲಿನಿಂದ ಬಿಡುಗಡೆಯಾದೆ,
ಹತ್ತು ವರ್ಷಗಳಿಂದ, ನಾನು ಮಾಡಿದ್ದ ತಪ್ಪಿಗೆ ಬಂಧಿಯಾಗಿದ್ದೆ
ಲೂಸಿಯಾನಕ್ಕೆ ಹೋಗುತ್ತಿದ್ದೆ, ನನ್ನ ರೋಸ್‌ನ ಕಾಣಲಿಕ್ಕೆ
ಎಂದೂ ಕಾಣದ ನನ್ನ ಮಗನನ್ನು ಅರಿಯಲಿಕ್ಕೆ

ಓಹ್ ಮಿಸ್ಟರ್, ರೋಸ್‌ಗೆ ನನ್ನ ಪ್ರೀತಿಯ ತಿಳಿಸು, ತಿಳಿಸುವಿ ತಾನೇ?
ನನ್ನಲ್ಲಿರುವ ಎಲ್ಲ ಹಣ ಕೊಡವಳಿಗೆ, ಕೊಳ್ಳಲಿ ಅವಳು ಒಳ್ಳೇ ದಿರಿಸು
ನನ್ನ ಮಗನಿಗೆ ತಿಳಿಸು, ನನಗವನ ಮೇಲೆ ಹೆಮ್ಮೆಯಿದೆ, ಮತ್ತೆ,
ಮರೆಯಬೇಡ, ರೋಸ್‌ಗೆ ನನ್ನ ಪ್ರೀತಿಯ ತಿಳಿಸು,

ನನಗೋಸ್ಕರ ಕಾದುದ್ದಕ್ಕೆ ಅವರಿಗೆ ನನ್ನ ಧನ್ಯವಾದಗಳ ತಿಳಿಸು,
ನನ್ನ ಮಗನಿಗೆ ಅವರಮ್ಮನಿಗೆ ಮನೆಯಲ್ಲಿ ಸಹಕರಿಸಲು ಹೇಳು
ನನ್ನ ರೋಸ್ ಒಬ್ಬಳೇ ಬದುಕುವುದು ಸರಿಯಲ್ಲ ಹೇಳಿಬಿಡು
ಇನ್ನೊಬ್ಬರಲಿ ಪ್ರೀತಿ ಹುಡುಕಿಕೊಳ್ಳಲಿ ಅವಳು

ಇಲ್ಲಿದೆ ಮಿಸ್ಟರ್, ನಾನು ದುಡಿದ ಎಲ್ಲ ಹಣದ ಚೀಲ
ನಗರಿವಿದೆ, ಇದು ಅವರಿಗೆ ಬಹಳದಿನಗಳಿಗಾಗದು,
ದೇವರ ದಯೆಯಿರಲಿ ನಿನಗೆ, ನೀನಿವತ್ತು ನನ್ನ ಕಂಡುದ್ದಕ್ಕೆ
ಮರೆಯಬೇಡ, ರೋಸ್‌ಗೆ ನನ್ನ ಪ್ರೀತಿಯ ತಿಳಿಸು,

ಓಹ್ ಮಿಸ್ಟರ್, ರೋಸ್‌ಗೆ ನನ್ನ ಪ್ರೀತಿಯ ತಿಳಿಸು, ತಿಳಿಸುವಿ ತಾನೇ?
ನನ್ನಲ್ಲಿರುವ ಎಲ್ಲ ಹಣ ಕೊಡವಳಿಗೆ, ಕೊಳ್ಳಲಿ ಅವಳು ಒಳ್ಳೇ ದಿರಿಸು
ನನ್ನ ಮಗನಿಗೆ ತಿಳಿಸು, ನನಗವನ ಮೇಲೆ ಹೆಮ್ಮೆಯಿದೆ, ಮತ್ತೆ,
ಮರೆಯಬೇಡ, ರೋಸ್‌ಗೆ ನನ್ನ ಪ್ರೀತಿಯ ತಿಳಿಸು,”

“Hello, I am Johnny Cash!”, ಅಂದಕೂಡಲೇ ಥಿಯೇಟರ್‌ನ ತುಂಬ ಚಪ್ಪಾಳೆ! ಅವನು ಗಿಟಾರ್‌ನ ತಂತಿ ಮೀಟಿದರೆ ಸಾವಿರ–ಸಾವಿರ ಯುವತಿಯರೆದೆಯಲ್ಲಿ ಝೇಂಕಾರ! ಹಾಡಲು ಶುರುಮಾಡಿದರೆ ಉದ್ಘೋಷ, ಹಾಡುಮುಗಿದರೆ ಥಿಯೇಟರ್ ತುಂಬಿ ಉಕ್ಕಿ ಹರಿಯುವ ಚಪ್ಪಾಳೆ–ಅವನು –**‘ಜಾನಿ ಕ್ಯಾಶ್’**. Rock Hall of Fame, Rockabilly Hall of Fame ಮತ್ತು Song Writers’ Hall of Fame ಮೂರೂ Hall of Fame ಗಳಲ್ಲಿ ಪ್ರತಿಷ್ಠಾಪಿತಗೊಂಡ ಕೇವಲ ಇಬ್ಬರು ಸಂಗೀತಕಾರರಲ್ಲಿ ಒಬ್ಬ –**ಜಾನಿ ಕ್ಯಾಶ್** ಮತ್ತು ಅವನ ಜೀವನಗಾಥೆ **‘ವಾಕ್ ದ ಲೈನ್’** ಚಲನ ಚಿತ್ರ.

ಬೈಬಲ್‌ನ ಪ್ರಾರ್ಥನಾಗೀತೆಗಳಿಂದ ಸಂಗೀತ ಜೀವನ ಶುರುಮಾಡಿದ ಜಾನಿಯ ಹಾಡುಗಾರಿಕೆ ಆಲಿಸಿ, ಆ ಕಾಲದ ಪ್ರಸಿದ್ಧ ರೆಕಾರ್ಡಿಂಗ್ ಕಂಪನಿ 'ಸನ್'ದ ಮಾಲೀಕ ಅವನನ್ನು ಒಂದೇ ಪ್ರಶ್ನೆ ಕೇಳಿದ, 'ಪ್ರಾರ್ಥನಾಗೀತೆಗಳನ್ನು ಎಲ್ಲರೂ ಹಾಡುತ್ತಾರೆ, ನಿನ್ನ ಹಾಡುಗಾರಿಕೆಯಲ್ಲಿ ಅಂಥಾದ್ದೇನಿದೆ? ಒಂದು ಕೆಲಸ ಮಾಡು, ಇದೆಲ್ಲವನ್ನು ಬಿಟ್ಟು ಒಂದು ಹೊಸ ಹಾಡು ಬರಿ. ಕಾಡಿನಂಚಿನ ಹೆದ್ದಾರಿಯ ಮೇಲೆ ಟ್ರಕ್‌ನ ನಡುವೆ ಸಿಕ್ಕಿಕೊಂಡು ಅಪಘಾತಕ್ಕೀಡಾಗಿ ಸಾಯುತ್ತಿರುವವನ ಭಾವನೆಗಳು, ಅವನ ಭಯಗಳ ಬಗ್ಗೆ ಬರೀ.' ಆಗ ಜಾನಿ ಬರೆದದ್ದೇ 'Cry, Cry' ಎನ್ನುವ ಅಮರಗೀತೆ! ತದನಂತರ ಆತ ಎಲ್ಲೂ ಹಿಂತಿರುಗಿ ನೋಡುವಂತಹ ಸನ್ನಿವೇಶವೇ ಬರಲಿಲ್ಲ.

ಎಲ್ಲ ಖ್ಯಾತ ಸಂಗೀತಗಾರರಂತೆ ಜಾನಿ ಕೂಡ ಮೊದಮೊದಲು ಕುಡಿತ, ಡ್ರಗ್, ಹುಡುಗಿಯರ ಹುಚ್ಚು ಬೆಳೆಸಿಕೊಂಡ. ಸತತ ತಿರುಗಾಟದಿಂದ ತನ್ನ ದಾಂಪತ್ಯವನ್ನೂ ಹಾಳುಮಾಡಿಕೊಂಡ, ವರ್ಷಗಳುದ್ದಕ್ಕೂ ಕಾಡಿ ಬೇಡಿ, ತನ್ನ ಸಂಗೀತಗೋಷ್ಠಿಯ ನಡುವೆಯೇ, ವೇದಿಕೆಯ ಮೇಲೆ ಸಿನಿಮೀಯವಾಗಿ ತನ್ನ ಸಹ-ಗಾಯಕಿ **'ಜೂನ್ ಕಾರ್ಟರ್'**ಳೆದುರು ಪ್ರೇಮಯಾಚನೆ ಮಾಡಿ ಅವಳನ್ನು ಮದುವೆಯಾದ. ಅವಳ ಪ್ರೇಮಕ್ಕೋಸ್ಕರವೇ ಕಾದು ಕಂಗೆಟ್ಟಿದ್ದವನಂತೆ ಕುಡಿತ, ಡ್ರಗ್ಸ್ ಎಲ್ಲವುಗಳಿಂದ ಹೊರಬಂದು ಇನ್ನಷ್ಟು ಹೊಸ ಹೊಸ ಹಾಡುಗಳನ್ನು ಬರೆದ, Hall of Fame ಗಳಲ್ಲಿ ಪ್ರತಿಷ್ಠಾಪನೆಗೊಂಡ, ಅಮೇರಿಕಾದ ಮನೆ ಮಾತಾದ.

ಅವನ ಬದುಕು-ಜೀವನ ಏನೆಲ್ಲ ತಾರಾತಿಕ್ಕಡಿಯಾದರೂ ಜಾನಿ ಸಂಗೀತವನ್ನು ಅಸಡ್ಡೆ ಮಾಡಲಿಲ್ಲ, ಅದು ಅವನ ಕೈ ಬಿಡಲಿಲ್ಲ. ಅವನ ಜೀವನದ ಕಷ್ಟಕರವೆನಿಸುವ ದಿನಗಳಲ್ಲೇ, ಕರಾಳ ಕ್ಷಣಗಳಲ್ಲೇ ಅವನ ಅತ್ಯುತ್ತಮ ಗೀತೆಗಳು ರಚನೆಯಾದವು, ಉತ್ತಮೋತ್ತಮ ಸಂಯೋಜನೆಗಳು ತಯಾರಾದವು. ಚಲನಚಿತ್ರದ ಹೆಸರಾದ, 'ವಾಕ್ ದ ಲೈನ್' (ತಂತಿ ಮೇಲಿನ ನಡಿಗೆ?) ಗೀತೆ ಕೂಡಾ ಅವನು ಜೂನ್‌ಳ ಪ್ರೇಮಕ್ಕೋಸ್ಕರ ಕಂಗೆಟ್ಟಿರುವ ಸಮಯದಲ್ಲೇ ಮೂಡಿದ್ದು! ಎಲ್ಲ ಸಂಗೀತಕಾರರಿಗಿಂತ ಬೇರೆಯೇ ಆಗಿದ್ದ ತನ್ನ ಗಡುಸು ಧ್ವನಿ, ಶ್ರೀಮಂತವಾದ ಸಾಹಿತ್ಯ, ಗಿಟಾರ್‌ನ ಸಂಚಲನ, ಅತ್ಯುತ್ಕೃಷ್ಟವೆನಿಸುವ ಸಂಗೀತ, ವೀಡಿಯೋ ಗಳಿಂದಾಗಿ ಹದಿನೈದು ಪ್ರತಿಷ್ಠಿತ ಗ್ರಾಮಿ ಅವಾರ್ಡ್‌ಗಳನ್ನೂ ಪಡೆದಿದ್ದ ಜಾನಿ ಅಂದಿನ ಉಳಿದ ಸಂಗೀತಕಾರರಂತೆ ತಾನೇ ಸೃಷ್ಟಿಸಿಕೊಂಡ ಸುವರ್ಣಮಹಲಿನಲ್ಲಿ ಜನಸಾಮಾನ್ಯರಿಂದ ದೂರವಾಗಿ ದೇವತೆಯಂತೆ ಬದುಕಲಿಲ್ಲ. ಎಂತಹ ದೊಡ್ಡ ಸಂಗೀತ ಕಚೇರಿಯಾದರೂ ತನ್ನ ಕಪ್ಪು ಬಟ್ಟೆ ಬದಲಿಸಲಿಲ್ಲ, ಅದಕ್ಕೂ ಕಾರಣ ಕೊಟ್ಟುಕೊಂಡು ಗೀತೆ ಬರೆದ. ಜೈಲುಗಳ ಸುಧಾರಣೆಗಾಗಿ ಹಾಡುಗಳ (ಫಾಲ್ಸಮ್ ಪ್ರಿಸನ್ ಬ್ಲೂಸ್) ಬರೆದು, ಆ ಚಳುವಳಿಯ ಮುಖ್ಯ ವಕ್ತಾರನಾಗಿಯೂ ಹೋರಾಟಮಾಡಿದ. ಬರೀ ಸಂಗೀತವನ್ನೇ ಜೀವದುಸಿರಾಗಿ ಮಾಡಿಕೊಂಡು ಚಿಕ್ಕಂದಿನಲ್ಲೇ ಕಳೆದುಕೊಂಡ ತನ್ನಣ್ಣನ ನೆನಪು, ಅಪ್ಪನ ತಿರಸ್ಕಾರ, ಮುರಿದ ಮೊದಲನೇ ಮದುವೆ, ತನ್ನದೇ ದುರ್ವ್ಯಸನಗಳು, ಕೊನೆಗೂ ತನಗೆ ದಕ್ಕಿದ ಜೂನ್ ಕಾರ್ಟರ್‌ಳ ಪ್ರೇಮ ಎಲ್ಲವನ್ನೂ ಅನುಭವಿಸಿ, ನೀನಿಲ್ಲದೇ ನಾನೇತಕ್ಕೆ ಎಂಬಂತೆ ಜೂನ್ ಸತ್ತ ನಾಲ್ಕೇ ತಿಂಗಳಿಗೆ (ಸೆಪ್ಟೆಂಬರ್ 12 2003) ತೀರಿಕೊಂಡ.

ಸುಮ್ಮಸುಮ್ಮನೆ ಹೋಗಿ ಕುಳಿತು ನನ್ನ ಸ್ನೇಹಿತನೊಡನೆ 'ವಾಕ್ ದ ಲೈನ್' ಚಲನಚಿತ್ರ ನೋಡಿದೆ, ನಿಜವಾಗಿಯೂ ಹುಚ್ಚನಾಗಿಬಿಟ್ಟೆ. ಚಿತ್ರದ ನಾಯಕನಟ 'ಜಾಕಸ್ ಫೀನಿಕ್ಸ್'ಗೇ ಈ ವರ್ಷದ ಅತ್ಯುತ್ತಮ ನಟ ಅಕಾಡೆಮಿ ಅವಾರ್ಡ್ ಸಿಗಬೇಕಾಗಿತ್ತು ಅನಿಸಿಬಿಟ್ಟಿತು. ನನ್ನ ಸ್ನೇಹಿತನಿಗೂ ಚಲನಚಿತ್ರ ಬಹಳ ಇಷ್ಟವಾಗಿಹೋಯ್ತು. ನಂತರ ಬಂದವನೇ ಗೂಗಲ್‌ನಲ್ಲಿ ವಿಕಿಪಿಡಿಯಾದಲ್ಲಿ ಜಾನಿ ಕ್ಯಾಶ್ ಬಗ್ಗೆ ಓದಿ ಕೊನೆಗೆ ಅವನದೇ ಖಾಸಗಿ ವೆಬ್‌ಸೈಟ್ **'ಜಾನಿಕ್ಯಾಶ್ ಡಾಟ್ ಕಾಂ'** ಗೆ ಲಗ್ಗೆ ಹಾಕಿದೆ. ಅಲ್ಲಿರುವ ಅವನ (ಡೌನ್‌ಲೋಡ್ ಆಗಲೊಲ್ಲದ) ಹಾಡುಗಳ ಭಂಡಾರವನ್ನು ನೋಡಿ ಬಾಯಾರಿದ್ದವನಂತೆ ಕಿವಿಗಳಿಗೆ ಹೆಡ್‌ಫೋನ್ಸ್ ಸಿಕ್ಕಿಸಿಕೊಂಡು ಕುಳಿತೆ. ಹಾಡುಗಳ ಕೇಳಿ, ಕೇಳಿ, ಅವುಗಳಿಗೆ ಇನ್ನಷ್ಟು ರಿಲೇಟ್ ಆಗೋಣ ಅಂತ ಗೂಗಲ್‌ನಿಂದ ಅವನ ಹಾಡುಗಳ ಸಾಹಿತ್ಯವನ್ನೆಲ್ಲ ಹುಡುಕಿ ತೆಗೆದು ಓದಿಕೊಂಡೆ. ಕೊನೆಗೆ ತಡವಾಗಿಯಾದರೂ ಪರವಾಗಿಲ್ಲ, ಇದೆಲ್ಲವನ್ನೂ ನಿಮಗೂ ಹೇಳಿಬಿಡೋಣ ಅಂತಾ... ☺

ಇಷ್ಟೊಂದು ತಡವಾಗಿ ಹೇಳ್ತಾಯಿದಿಯಲ್ಲೋ ಮಾರಾಯ, ಆ ಚಲನಚಿತ್ರ ಥಿಯೇಟರ್‌ಗಳಿಂದಲೇ ಎತ್ತಂಗಡಿಯಾಗಿ ಹೋಯ್ತಲ್ಲ ಅಂತ ಗೊಣಗಬೇಡಿ, ಸಿಡಿಮಿಡಿಗೊಳ್ಳಬೇಡಿ, ನಿಮ್ಮಂಥವರಿಗೋಸ್ಕರವೇ ವಿಸಿಡಿ, ಡಿವಿಡಿಗಳಿವೆ, ಗೂಗಲ್ ಇದೆ, ಮತ್ತು ಜಾನಿಕ್ಯಾಶ್ ಡಾಟ್ ಕಾಂ ಕೂಡಾ ಇದೆ!

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್. ks_shivu@yahoo.com**